## 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

## Spl. C. No. 23/2014

| | | |
|---|---|---|
| ಹೆಸರು | ಮಂಜುನಾಥ | ಪ್ರಾಸಾ.10 |
| ತಂದೆಯ ಹೆಸರು | ಚೆನ್ನಬಸವಯ್ಯ | ಚಾಸಾ.4 |
| ವಯಸ್ಸು | 47 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ತೋವಿನಕೆರೆ | |

**ದಿನಾಂಕಃ 02.03.2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಎಸ್.ಪಿ.ಪಿ ರವರಿಂದಃ**

ನನಗೆ ಸ್ವಾಮಿ ಎಂದು ಕರೆಯುತ್ತಾರೆ. ಆರೋಪಿಗಳು ಮತ್ತು ಚಾಸಾ.1 ರವರು ಗೊತ್ತು. ನಾನು ಯಾವುದೇ ಗಲಾಟೆ ನೋಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಎಸ್‌ಪಿಪಿರವರು ಅನುಮತಿ ಕೋರಿದ್ದು , ಸಾಕ್ಷಿಯ ಕಲಂ 161 ರ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಸ್.ಪಿ.ಪಿ ರವರಿಂದ.**

ಸುರುಪುರ ರವರ ಸರ್ವೆ ನಂ 158 ರ ಜಮೀನಿನ ಬಳಿ ನನ್ನ ಜಮೀನು ಇದೆ ಎಂದರೆ ಸರಿ. ನನ್ನ ಜಮೀನಿನ ಸರ್ವೆ ನಂ 156 ಆಗಿರುತ್ತದೆ. ಸುರುಪುರ ರವರ ಜಮೀನು 4 ಎಕರೆ ತೆಂಗಿನ ತೋಟ ಎಂದರೆ ಸರಿ. ಅವರೇ ಜಮೀನನ್ನು ಮಾಡಿಸುತ್ತಿದ್ದಾರೆ ಎಂದರೆ ಸರಿ. ಅವರ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ಲಕ್ಷ್ಮಯ್ಯ ಅವರ ಕೂಲಿ ಕೆಲಸಕ್ಕೆ ಬರುತ್ತಿದ್ದರು ಎಂದು ಪ್ರಶ್ನಿಸಲಾಗಿ, ಸಾಕ್ಷಿ ಅವಾಗ ಅವಾಗ ಬರುತ್ತಿದ್ದರು ಎಂದು ನುಡಿಯುತ್ತಾರೆ.

ನಾನು ದಿನಾ ಬೆಳಗ್ಗೆ 9 ಗಂಟೆಯ ವೇಳೆಗೆ ತೋಟಕ್ಕೆ ಹೋಗುತ್ತೇನೆ ಎಂದರೆ ಸರಿ. ಅವರ ತೋಟದಲ್ಲಿ ಸ್ವಲ್ಪ ತೆಂಗಿನ ಕಾಯಿ ಬಿಟ್ಟಿದ್ದವು ಎಂದೆ ಸರಿ. ದಿಃ 04.08.13 ರಂದು ಆರೋಪಿಗಳು ರೋಟಿಯಿಂದ ಬೆಳಗ್ಗೆ 9 ಗಂಟೆಗೆ ಕಾಯಿ ಕೀಳುತ್ತಿದ್ದು , ಲಕ್ಷ್ಮಯ್ಯರವರು ಈ ಬಗ್ಗೆ ಪ್ರಶ್ನಿಸಲಾಗಿ ಆರೋಪಿಗಳು ಅವರಿಗೆ ಜಾತಿ ನಿಂದನೆ ಮಾಡಿ , ಅವಾಚ್ಯಶಬ್ದಗಳಿಂದ ನಿಂದಿಸಿ ಮಹಾದೇವಯ್ಯ ಚಾಸಾ.1 ರವರ ಎದೆಯ ಬಲಭಾಗಕ್ಕೆ ಮತ್ತು ಎಡಭಾಗಕ್ಕೆ ಗುದ್ದಿದ ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಕೆಳಕ್ಕೆ ಬಿದ್ದಿದ್ದು ಉಳಿದ ಆರೋಪಿಗಳು ಕಾಲಿನಿಂದ ಚಾಸಾ.1 ರವರ ಹೊಟ್ಟೆ ಮತ್ತು ಮಂಡಿಯ ಬಳಿ ತುಳಿದು ನೋವು ಉಂಟು ಮಾಡಿದರು ಎಂದರೆ ಸರಿಯಲ್ಲ. ಆಗ ನಾನು ,ದಾಸಪ್ಪ , ಸಣ್ಣ ತಿಮ್ಮಯ್ಯ ಮತ್ತು ಚಂದ್ರಶೇಖರಯ್ಯ ಹೋಗಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಚಂದ್ರಶೇಖರಯ್ಯ ರವರು ಚಾಸಾ.1 ರವರವನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ದಿಃ 08.08.13 ರಂದು ಪ್ರಕರಣದ ತನಿಖಾಧಿಕಾರಿಯಾದ ಚಾಸಾ.17 ರವರ ಮುಂದೆ ನಿಪಿ.7 ರಂತೆ ಹೇಳಿಕೆ ನೀಡಿದ್ದರೂ ವ್ಯತಿರಿಕ್ತವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಎಲ್ಲಾ ಆರೋಪಿತರುಗಳು ಲಿಂಗಾಯುತ ಜಾತಿಗೆ ಸೇರಿದವರು ಎಂದರೆ ಸರಿ. ಅವರುಗಳಿಗೆ ಸಹಾಯ ಮಾಡಲು ಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದ.</u>**

ಸರ್ವೆ ನಂ 156 ಕ್ಕೆ ಸಂಬಂದಪಟ್ಟಂತೆ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಉಪವಿಬಾಗಅಧಿಕಾರಿಗಳು ಸರ್ಕಾರದ ವಶಕ್ಕೆ ಪಡೆದಿದ್ದಾರೆ ಎಂದರೆ ಸರಿ.

ಸರ್ವೆ ನಂ 156 ಜಮೀನಿಗೆ ಹೊಂದಿಕೊಂಡಂತೆ 1 ನೇ ಆರೋಪಿಯ ಮನೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋಗಳನ್ನು ತೋರಿಸಿ ಪೊಟೋದಲ್ಲಿ ಮಹದೇವಯ್ಯ ಮತ್ತು ಅವರ ಹೆಂಡತಿ ಇದ್ದಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ, ಸುರುಪುರ ರವರ ಜಮಿನಿನಲ್ಲಿ ಮಹದೇವಯ್ಯ ಮನೆ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮಹದೇವಯ್ಯರವರ ಮನೆ ಈ ಮೊದಲು ಸುಟ್ಟು ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಸುರುಪುರರವರು ಲಿಂಗಾಯುತರು ಎಂದರೆ ಸರಿ. ಸುರುಪುರ ಮತ್ತು ನಾನು ಸ್ನೆಹಿತರು ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.